


ಶಿರಸಿ ಮಾರಿಕಾಂಬ ದೇವಿ ಜಾತ್ರೆ

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ 'ಚೆನ್ನುಡಿ' ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.

ಇಮೇಲ್–
**editorsu@sudha.co.in**

# ಸಾಲು ಸಾಲು ಹಬ್ಬಗಳೂ ಹಾಡುಗಳೂ...

ಹುಟ್ಟಿನಿಂದಲೇ ಮನೆ, ಮನದಲ್ಲಿ ಹಾಸುಹೊಕ್ಕಾಗುವ ಹಾಡುಗಳ ಬಾಂಧವ್ಯವನ್ನು ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ ಕಡೆಯ ಹವ್ಯಕ ಕನ್ನಡದಲ್ಲಿ (ಹವಿಗನ್ನಡ) ಉಣಬಡಿಸಿದ್ದಾರೆ

ಸರೋಜಾ ಪ್ರಕಾಶ



ಬೇಡರ ವೇಷ

'ಬಾರೇ ಭಾಗ್ಯದ ನಿಧಿಯೇ... ಕರವೀರ ನಿವಾಸಿನಿ ಸಿರಿಯೇ...' ಹಾಡು ಕೇಳ್ತಿದ್ದಾಂಗೇ ರಾಶಿ ಆಶ್ಚರ್ಯ ಆಗೋತು ಎಂಗೆ. ಅರೆ! ಎಂಗಳೂರಿನ ಮನೆಮನೆಲ್ಲೂ ಕೇಳ ಹಾಡು ಇದು. ಇಲ್ಲೂ ಈ ಪುಣೆ ಸಿಟಿಯಲ್ಲೂ ಕೇಳ್ತಲಿ ಹೇಳಿ. ಅದು ಎಂಗಳ ಸ್ನೇಹಿತ್ರು ದೇಶಪಾಂಡೆ ಅವರ ಮಗಳ ಮದ್ವೆ ಸಂದರ್ಭ ಆಗಿತ್ತು. ಮದ್ವೆ ಕೂಸಿನ್ನ ಮಂಟಪಕ್ಕೆ ಕರ್ಕಂಡು ಹೋಪಕರೆ ಟಮಕಿ, ಡೋಲು ಬಾರಿಸ್ಕೋತ, ಹಾಡ್ತಾ ನಾಲ್ಕು ಗಂಡುಹುಡ್ರು ಸಂಗ್ತಿಗೆ ಬರ್ತಾ ಇದ್ದಿದ್ದ. ಆಹಾ! ಮೈ ಜುಂ ಎಂದಿತ್ತು ಆ ಹಾಡು ಕೇಳಿ.

ಎಂಗಳೂರ್ನಲ್ಲಿ ಹಂಗೇಯಾ. ಪ್ರತೀ ಮನೆ ಹೆಣ್ಣುಡ್ರೂ ಚೊಲೊ ಹಾಡು ಹೇಳವ್ರೇ ಆಗಿರ್ತ. ಎಂತಕ್ಕೆ ಗೊತ್ತಿದ್ದ? ಶಣ್ ಕಿದ್ದಾಗಿಂದ ಅಮ್ಮ, ಅಕ್ಕ, ಅತ್ತೆ ಜತಿಗೆ ಹಾಡು ಶರಗುಟ್ಟದು, ತಾನೂ ಹೇಳದು ಇದ್ದೇ ಇರ್ತು. ಕೊಡೆ ಅಮಾಸೆಯಿಂದ ಹಬ್ಬ ಶುರುವಾಗ್ತಲಿ, ಆವಾಗಿಂದ ಹಾಡಿನ ಪಟ್ಟಿ ತೆಗ್ದು ಇಟ್ಗಂಬ್ದೇಯಾ. ಕೃಷ್ಣಾಷ್ಟಮಿಯಲ್ಲಿ ಕೃಷ್ಣ